# ಕರ್ನಾಟಕ ಸರ್ಕಾರ
## (ಸಾರ್ವಜನಿಕ ಶಿಕ್ಷಣ ಇಲಾಖೆ)

ಹೊಸ ಸಾರ್ವಜನಿಕ ಕಛೇರಿಗಳು,
ನೃಪತುಂಗ ರಸ್ತೆ,
ಬೆಂಗಳೂರು - 560 001
ದೂರವಾಣಿ (ಕ) : 080-2214350
ಫ್ಯಾಕ್ಸ್ : 080-22212137
ಇ-ಮೇಲ್ : cpi.edu.sgkar@kar.nic.in

ಸಂಖ್ಯೆ:ಖಾ.ಶಾ.ವ.ಪ್ರಮೇಲುಸಹಿ.72/2016-17 ದಿನಾಂಕ:01-06-2016

**ಸುತ್ತೋಲೆ**

ವಿಷಯ: ಸರ್ಕಾರಿ ಶಾಲೆಯಲ್ಲಿ ಓದಿದ ಮಕ್ಕಳ ವರ್ಗಾವಣೆ ಪ್ರಮಾಣ ಪತ್ರಕ್ಕೆ ಇಲಾಖಾಧಿಕಾರಿಗಳ ಮೇಲು ರುಜು ಮಾಡುವ ಕುರಿತು
ಉಲ್ಲೇಖ: ಈ ಕಛೇರಿ ಸುತ್ತೋಲೆ ಸಂಖ್ಯೆ:ಎ9.ಇತರೆ-ವರ್ಗ ಚೀಟಿ-13/86-87 ದಿನಾಂಕ 06-11-1986

-------

ಈ ಕಛೇರಿಯ ಸುತ್ತೋಲೆ ಸಂಖ್ಯೆ:ಸಿ7(2) ಖಾ.ಶಾ.ವ.ಪ್ರಮೇಲುಸಹಿ.2016-17 ದಿನಾಂಕ 25-05-2016ರಂತೆ ಖಾಸಗಿ ಶಾಲೆಗಳು ನೀಡುವ ವರ್ಗಾವಣೆ ಪ್ರಮಾಣ ಪತ್ರಗಳಿಗೆ ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳು ಮೇಲು ರುಜು ಮಾಡುವಂತೆ ಸೂಚಿಸಲಾಗಿತ್ತು. ವಿದ್ಯಾರ್ಥಿಯು ತಾನು ಕಲಿತ ಶಾಲೆಯು ಅಧಿಕೃತ ಶಾಲೆ ಎನ್ನುವುದನ್ನು ಖಾತ್ರಿಪಡಿಸಿಕೊಳ್ಳಲು ಈ ಕ್ರಮವನ್ನು ತೆಗೆದುಕೊಳ್ಳಲಾಗಿತ್ತು. ಆದಾಗ್ಯೂ ಈ ವ್ಯವಸ್ಥೆಯಿಂದ ಪೋಷಕರು ಮತ್ತು ಶಾಲೆಗಳ ಸಿಬ್ಬಂದಿಯು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿಗೆ ಅಲೆದಾಡುವುದರಿಂದ ತೊಂದರೆಯಾಗುತ್ತಿರುವುದಾಗಿ ದೂರುಗಳು ಬಂದಿರುತ್ತವೆ. ಇದರ ಜೊತೆ ಮೊದಲೇ ಕಾರ್ಯ ಒತ್ತಡದಲ್ಲಿರುವ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಗೆ ಮತ್ತಷ್ಟು ಹೊರೆ ಬಿದ್ದಂತಾಗಿರುತ್ತದೆ.

ಇತ್ತೀಚಿನ ತಂತ್ರಜ್ಞಾನದ ಅಭಿವೃದ್ಧಿಯಿಂದ ಶಾಲೆಗಳ ವಿಶ್ವಾಸಾರ್ಹತೆಯನ್ನು ಆನ್‌ಲೈನ್ ಮೂಲಕ ಪರೀಕ್ಷಿಸಬಹುದಾಗಿದೆ. ಈ ಸುತ್ತೋಲೆಯನ್ನು ಹೊರಡಿಸಿದ ನಂತರ, ಇಲಾಖೆಯು UDISE ಮೂಲಕ ಅಭಿವೃದ್ಧಿಪಡಿಸಿದ ರಾಜ್ಯದ ಎಲ್ಲಾ ಶಾಲೆಗಳ ದತ್ತಾಂಶವನ್ನು ಸಾರ್ವಜನಿಕರಿಗೆ ಲಭ್ಯಗೊಳಿಸಲಾಗಿದೆ. ಆದ್ದರಿಂದ, ಮೇಲ್ಕಂಡ ಉಲ್ಲೇಖದಲ್ಲಿನ ಸುತ್ತೋಲೆಯನ್ನು ಹಿಂಪಡೆಯಲಾಗಿದೆ. ರಾಜ್ಯದ ಯಾವುದೇ ಶಾಲೆಗಳಿಂದ ನೀಡಲ್ಪಟ್ಟ ವರ್ಗಾವಣೆ ಪತ್ರಗಳನ್ನು ಯಾವುದೇ ಮೇಲು ರುಜುಗಾಗಿ ಕಳುಹಿಸುವ ಅವಶ್ಯಕತೆ ಇರುವುದಿಲ್ಲ.

ಖಾಸಗಿ ಶಾಲೆಗಳು ನೀಡುವ ವರ್ಗಾವಣೆ ಪತ್ರಗಳಲ್ಲಿ ಸಂಬಂಧಿಸಿದ ಶಾಲೆಯ DISE ಕೋಡ್‌ನ್ನು ಕಡ್ಡಾಯವಾಗಿ ನಮೂದಿಸುವುದು. ಯಾವುದೇ ಶಾಲೆಯು ತಾನು ಪಡೆದ ವರ್ಗಾವಣೆ ಪತ್ರದಲ್ಲಿರುವ UDISE ಕೋಡ್‌ನ್ನು ಬಳಸಿಕೊಂಡು www.schooleducation.kar.nic.in ವೆಬ್‌ಸೈಟ್‌ನಲ್ಲಿನ 'ಸ್ಕೂಲ್ ಸರ್ಚ್' ಆಯ್ಕೆ ಬಳಸಿ ಸಂಬಂಧಿಸಿದ ಶಾಲೆಯ ವಿಶ್ವಾಸಾರ್ಹತೆಯನ್ನು ಪರೀಕ್ಷಿಸಿಕೊಳ್ಳಬದಾಗಿದೆ. ಈ ನಿರ್ದೇಶನಗಳನ್ನು ತಕ್ಷಣ ಜಾರಿಗೆ ಬರುವಂತೆ ಅನುಷ್ಠಾನ ಮಾಡುವುದು.

ಆಯುಕ್ತರು,
ಸಾರ್ವಜನಿಕ ಶಿಕ್ಷಣ ಇಲಾಖೆ,
ಬೆಂಗಳೂರು

**ಅಗತ್ಯ ಕ್ರಮಕ್ಕಾಗಿ:**

1) ರಾಜ್ಯದ ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರು
2) ರಾಜ್ಯದ ಎಲ್ಲಾ ಸಹನಿರ್ದೇಶಕರುಗಳು
3) ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು – ಎಲ್ಲಾ ಶಾಲೆಯ ಮುಖ್ಯೋಪಾಧ್ಯಾಯರುಗಳಿಗೆ ಮಾಹಿತಿ ಒದಗಿಸುವುದು

# GOVERNMENT OF KARNATAKA
(Department of Public Instruction)

New Public Offices
Nrupatunga Road,
Bangalore - 560 001.
Phone: 080-22214350
Fax: 080-22212137
E-mail: cpi.edu.sgkar@kar.nic.in

ಸಂಖ್ಯೆ:ಸಿ7(2) ಖಾ.ಶಾ.ವ.ಪ್ರಮೇಲುಸಹಿ.72/ 2016-17 Date 01.06.2016

## CIRCULAR

Sub : Counter signing by Departmental Officers on the Transfer certificate of Government School children.

Ref : This office Circular No. ಎ9.ಇತರೆ-ವರ್ಗ ಚೀಟಿ-13:36:86.87 dt 06.11.1986.

----------

The transfer Certificates issued from private schools were to be countersigned by the BEO as per directions issued vide letter/Notification No. ಸಿ7(2) ಖಾ.ಶಾ.ವ.ಪ್ರಮೇಲುಸಹಿ.2016-17 dated 25.5.2016. This was done to ensure that the school in which the student studied is a recognized school. However, there are widespread complaints that this system causes inconvenience to the parents and schools by going around BEO offices. Moreover, this has added to the work load of BEO offices which are otherwise heavily loaded.

Due to the recent development in technology, the genuineness of the schools could be verified online. After this circular was issued, the department has established a database of all schools in the state through U-DISE. Hence, the directions issued vide the circular referred (1) above are hereby withdrawn. The transfer certificates issued by any schools in the state need not be sent for any countersignature.

The Private Schools are hereby directed to issue the transfer certificate compulsorily mentioning their DISE code of their school. Any school that is receiving a transfer certificate so issued can go the website **www.schooleducation.kar.nic.in** . By entering the DISE code in the school search, the genuineness of the previous school can be verified on line. These directions shall be implemented with immediate effect.

Commissioner for Public Instruction,
Bangalore.

To

1) DDPI of all districts
2) All JDs of the Department
3) All BEOs with direction to provide information to all Head Masters/mistress of schools